# 6

# ಪರಸ್ಪರ ಪ್ರೀತಿ

ಕ್ರೈಸ್ತರ ನಿಶ್ಚಯವಾದ ಕಾರ್ಯಗಳ ಕುರಿತು 1 ಯೋಹಾನದಲ್ಲಿ ಗಮನಿಸುತ್ತೇವೆ. ಅವುಗಳು ಜೀವಿತಕ್ಕೆ ಅತ್ಯಧಿಕವಾದವುಗಳೇ.

ಬದಲಾಗುವ ಸಂಗತಿಗಳು ಬದಲಾಗುವಾಗ ಅದು ಅನಿಶ್ಚಯ ಎಂದು ಭಾವಿಸುತ್ತೇವೆ. ಕೆಲವು ನಿಶ್ಚಯವಾದವುಗಳು ಒಳ್ಳೇಯದೆ. ಅವುಗಳು ಸತ್ಯವೆಂದು ತಿಳಿಯಬಹುದು. ಈ ನಿಶ್ಚಯವಾದವುಗಳಲ್ಲಿ, ಕ್ರೈಸ್ತರು ತಿಳಿಸುವ ತಂದೆಯೊಂದಿಗಿನ ಅನ್ಯೋನ್ಯತೆ ಹಾಗೂ ರಕ್ಷಣೆಯು ಖಚಿತವಾದ ಸಂಗತಿಗಳಾಗಿವೆ. ಅದ್ದರಿಂದ ಪಾಪದ ಮೇಲೆ ಜಯ ಹೊಂದಬಹುದಾಗಿದೆ!

ಪರಸ್ಪರ ಪ್ರೀತಿ ಎಂಬ ಇನ್ನೊಂದು ನಿಶ್ಚಯತ್ವವನ್ನು ಈ ಪಾಠದಲ್ಲಿ ಗಮನಿಸೋಣ. "ಪ್ರೀತಿ" ಎಂಬ ಪ್ರಸ್ತಾಪವನ್ನು ಬರಹಗಾರನು ಈ ಪತ್ರಿಕೆಯಲ್ಲಿ ಪ್ರಮುಖ ಅಂಶವಾಗಿಸಿದ್ದಾನೆ. "ಪ್ರೀತಿ"[1] ಎಂಬದು ಕ್ರಿಯಾ KJV ಪದ ಅಥವಾ ನಾಮ ಪದವಾಗಲಿ ಆಗಿರುವದಿಲ್ಲ. ಒಟ್ಟು ನಾಲ್ವತ್ತೈದು ಬಾರಿ 1 ಯೋಹಾನದಲ್ಲಿ ಈ ಪದ ಪ್ರಯೋಗ ಮಾಡಿರುವನು![2] ಆದರಿಂದ ಅವನನ್ನು "ಪ್ರೀತಿಯ ಅಪೊಸ್ತಲನು" ಅಥವಾ 1 ಯೋಹಾನದಲ್ಲಿ "ಪ್ರೀತಿಯ ಪತ್ರಿಕೆ" ಎನ್ನಲಾಗಿದೆ 1 ಯೋಹಾನ 4. ಹದಿನೈದು ವಚನಗಳಲ್ಲಿ ಇಪ್ಪತ್ತೊಂಬತ್ತು ಬಾರಿ (ವಚನಗಳು 7-21), "ಪ್ರೀತಿ" ಎಂಬ ಪದ ಬಳಕೆಯಾಗಿದೆ. ಮೂರು ವಚನಗಳಲ್ಲಿ ಒಂದು ಬಾರಿ ಈ ಪದ ಪ್ರಯೋಗ ಮಾಡಲಾಗಿದೆ.[3] 1 ಕೊರಿಂಥ 13ನೇ ಅಧ್ಯಾಯವು ಪ್ರೀತಿಯ ಅಧ್ಯಾಯವಾಗಿದ್ದರೂ, 1 ಯೋಹಾನ 4ನೇ ಅಧ್ಯಾಯಕ್ಕೆ ಆ ಬಿರುದನ್ನು ನೀಡಬಹುದಾಗಿದೆ.

4ನೇ ಅಧ್ಯಾಯದಲ್ಲಿ ಎರಡು ಉದ್ದೇಶಗಳನ್ನು ನೀಡಲಾಗಿದೆ: ಸುಳ್ಳು ಬೋಧಕರ ಕುರಿತು ಎಚ್ಚರಿಕೆಯನ್ನು ನೀಡಿ, ಪರಸ್ಪರ ಪ್ರೀತಿಸಬೇಕು ಎಂದು ತಿಳಿಸಿರುವನು. ಈ ಎರಡು ಅಂಶಗಳ ಮೂಲಕ, ದೇವರನ್ನು ಮೆಚ್ಚಿಸುವ ಬುನಾದಿ ನೀಡಲಾಗಿದೆ: ಈ ಸಿದ್ಧಾಂತಗಳನ್ನು ಮನಗೊಂಡು, ಪರಸ್ಪರ ಪ್ರೀತಿಸಬೇಕು:

> ಪ್ರಿಯರೇ, ಅನೇಕ ಮಂದಿ ಸುಳ್ಳುಪ್ರವಾದಿಗಳು ಲೋಕದೊಳಗೆ ಬಂದಿರುವದರಿಂದ ನೀವು ಆತ್ಮದ ಎಲ್ಲಾ ನುಡಿಗಳನ್ನು ನಂಬದೆ ಆಯಾ ನುಡಿಗಳು ದೇವರಿಂದ ಪ್ರೇರಿತವಾದವುಗಳೋ ಅಲ್ಲವೋ ಎಂದು ಅವುಗಳನ್ನು ಪರೀಕ್ಷಿಸಬೇಕು. ಪ್ರೇರಿಸುವಂಥವನು ದೇವರ ಆತ್ಮನೇ ಎಂದು ತಿಳುಕೊಳ್ಳುವದಕ್ಕೆ ಲಕ್ಷಣವೇನಂದರೆ ಮನುಷ್ಯನಾಗಿ ಬಂದ ಯೇಸು ಕ್ರಿಸ್ತನನ್ನು ಒಪ್ಪಿಕೊಳ್ಳುವ ಆತ್ಮವು ದೇವರಿಂದ ಪ್ರೇರಿತವಾದದ್ದು. ಯೇಸುವನ್ನು ಒಪ್ಪದೆ ಇರುವ ಆತ್ಮವು ದೇವರಿಂದ ಪ್ರೇರಿತವಾದದ್ದಲ್ಲ; ಅದು ಕ್ರಿಸ್ತವಿರೋಧಿಯ ಆತ್ಮವಾಗಿದೆ. ಅದು ಬರುವದೆಂಬದನ್ನು ನೀವು ಕೇಳಿದ್ದೀರಲ್ಲಾ; ಈಗಲೂ ಲೋಕದಲ್ಲಿ ಅದೆ. ಪ್ರಿಯರಾದ ಮಕ್ಕಳೇ, ನೀವಂತೂ ದೇವರಿಂದ ಹುಟ್ಟಿದವರಾಗಿದ್ದೀರಿ; ಮತ್ತು ಲೋಕದಲ್ಲಿರುವವನಿಗಿಂತ ನಿಮ್ಮಲ್ಲಿರುವಾತನು ಹೆಚ್ಚಿನವನಾಗಿರುವದರಿಂದ ನೀವು ಆ ಸುಳ್ಳುಪ್ರವಾದಿಗಳನ್ನು ಜಯಿಸಿದ್ದೀರಿ. ಅವರು ಲೋಕದಿಂದ ಹುಟ್ಟಿದವರಾಗಿದ್ದಾರೆ; ಈ ಕಾರಣದಿಂದ ಅವರು ಲೋಕಪ್ರೇರಿತರಾಗಿ ಮಾತಾಡುತ್ತಾರೆ, ಮತ್ತು ಲೋಕದವರು ಅವರ ಮಾತನ್ನು ಕೇಳುತ್ತಾರೆ. ನಾವಂತೂ ದೇವರಿಂದ ಹುಟ್ಟಿದವರಾಗಿದ್ದೇವೆ; ದೇವರನ್ನು ಬಲ್ಲವನು ನಮ್ಮ ಮಾತನ್ನು ಕೇಳುತ್ತಾನೆ; ದೇವರಿಂದ ಹುಟ್ಟದವನು ನಮ್ಮ ಮಾತನ್ನು ಕೇಳುವದಿಲ್ಲ. ಇದು ಸತ್ಯವನ್ನು ಬೋಧಿಸುವ ಆತ್ಮ, ಅದು ಸುಳ್ಳನ್ನು ಬೋಧಿಸುವ ಆತ್ಮ ಎಂದು ಇದರಿಂದಲೇ ತಿಳುಕೊಳ್ಳುತ್ತೇವೆ.

ಯೇಸು ಕ್ರಿಸ್ತನು ಮಾನವನಾಗಿ ಬರಲಿಲ್ಲ ಎಂಬುದು ಸುಳ್ಳು ಬೋಧಕರುಗಳ ತತ್ವವಾಗಿತ್ತು. ಅವರು ಆತ್ಮ ಪ್ರೇರಿತರಾಗಿದ್ದರು ಎಂದು ಹೇಳಿಕೊಂಡಿದ್ದರೂ ಅವರು ಅದಕ್ಕೆ ತದ್ವಿರುದ್ಧವಾಗಿದ್ದರು. ಆದ್ದರಿಂದ ಅವರು ಕ್ರಿಸ್ತ ವಿರೋಧಿಯ ಆತ್ಮವನ್ನು ಹೊಂದಿದ್ದರು. ಅವರ ಸಿದ್ಧಾಂತಗಳನ್ನು ಅಂಗೀಕರಿಸುವ ಜನರನ್ನು ಸಹ ಹೊಂದಿದ್ದು. ಪ್ರಪಂಚವು ಅವರನ್ನು ಆಲಿಸುತ್ತಿತ್ತು (ವಚನ 5). ಆದರೆ ಯೋಹಾನನ ಓದುಗರು ಅವರನ್ನು ಅನುಸರಿಸಲಿಲ್ಲ.

ಅವರು ಸತ್ಯವನ್ನು ಹೇಳುವಲ್ಲಿ ಅಥವಾ ತಪ್ಪನ್ನು ಯಾವ ಆತ್ಮದಿಂದ ಬೋಧಿಸುತ್ತಿದ್ದರು ಎಂಬುದನ್ನು ಅರಿತ್ತಿದ್ದರು.

ಸುಳ್ಳು ಬೋಧಕರ ಕುರಿತು ತಿಳಿಸಿದ ನಂತರ, ಯೋಹಾನನು ತನಗೆ ಪ್ರಿಯವಾದ ವಿಚಾರವನ್ನು ತಿಳಿಸಿದನು. ದೇವರು ತನ್ನ ಪ್ರೀತಿಯನ್ನು ನಮಗೆ ನೀಡಿರುವದರಿಂದ, "ನಾವು ಪರಸ್ಪರ ಪ್ರೀತಿಸಬೇಕು."

## ದೇವರ ಪ್ರೀತಿಯ ನಿಮಿತ್ತವಾಗಿ (1 ಯೋಹಾನ 4:7-11)

"ಪರಸ್ಪರ ಪ್ರೀತಿಸಬೇಕು" ಎಂಬ ವಿಷಯವು ಈ ಪಾಠಗಳ ಸರಣಿಯಲ್ಲಿನ ವಿಚಾರಗಳಂತೆ ಇರುವದಿಲ್ಲ. ಪರಸ್ಪರ ಪ್ರೀತಿಸಬೇಕು ಎಂಬದು, ಕ್ರೈಸ್ತರ ಜವಾಬ್ದಾರಿಯುತ ವಾದ ಆಶೀರ್ವಾದವಾಗಿದೆ. ಪ್ರೀತಿಯು ಆಶೀರ್ವಾದವಾಗಿದೆ. ದೇವರು ನಮಗೆ ನೀಡಿರುವ ಪ್ರೀತಿಯ ವಿಚಾರದಲ್ಲಿ ಯೋಹಾನನು ಮಾತಾಡಿದನು. ಇದು ನಿಶ್ಚಯದ ಪ್ರಸ್ತಾಪವಾಗಿದೆ.

*ದೇವರ ನಿಶ್ಚಯವಾದ ಪ್ರೀತಿ.* ಅಧ್ಯಾಯ 1 ಯೋಹಾನ 4ರಲ್ಲಿ, ಪ್ರೀತಿ ಪ್ರಸ್ತಾಪದ ಕಥೆಯನ್ನು ಆರಂಭಮಾಡಿರುವನು. "ಪ್ರಿಯರೇ, ನಾವು ಒಬ್ಬರನ್ನೊಬ್ಬರು ಪ್ರೀತಿಸೋಣ. ಪ್ರೀತಿಯು ದೇವರಿಂದಾಗಿದೆ, ಮತ್ತು ಪ್ರೀತಿ ಮಾಡುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನೂ ದೇವರನ್ನು ಬಲ್ಲವನೂ ಆಗಿದ್ದಾನೆ" (1 ಯೋಹಾನ 4:7). ದೇವರು ನಮ್ಮನ್ನು ಪ್ರೀತಿಸಿ ರುವದರಿಂದ, ನಾವು ಒಬ್ಬರನ್ನೊಬ್ಬರು ಪ್ರೀತಿಸಬೇಕು:

> ದೇವರನ್ನು ಪ್ರೀತಿಸಬೇಕು (1 ಯೋಹಾನ 4:8; ನೋಡಿರಿ 4:16).
>
> ದೇವರು ತನ್ನ ಒಬ್ಬನೇ ಮಗನನ್ನು ನಾವು ಆತನ ಮೂಲಕ ಜೀವಿಸುವದಕ್ಕಾಗಿ ಲೋಕಕ್ಕೆ ಕಳುಹಿಸಿಕೊಟ್ಟದರಲ್ಲಿಯೇ ದೇವರ ಪ್ರೀತಿಯು ನಮ್ಮಲ್ಲಿ ಪ್ರತ್ಯಕ್ಷವಾಗಿದೆ (1 ಯೋಹಾನ 4:9).
>
> ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ, ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪ ನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದರಲ್ಲಿಯೇ ಪ್ರೀತಿಯ ನಿಜ ಗುಣವು ತೋರಿಬರುತ್ತದೆ (1 ಯೋಹಾನ 4:10; ನೋಡಿರಿ 3:1).

ಆತನು ನಂತರ ಒಂದು ಅಂತಿಮವಾದಂತಹ ಹೇಳಿಕೆಯನ್ನು ಹೇಳಿದನು: "ಪ್ರಿಯರೇ, ದೇವರು ನಮ್ಮನ್ನು ಹೀಗೆ ಪ್ರೀತಿಸಿದ ಮೇಲೆ ನಾವು ಒಬ್ಬರನ್ನೊಬ್ಬರು ಪ್ರೀತಿಸುವ ಹಂಗಿನಲ್ಲಿದ್ದೇವೆ ಎಂಬುದಾಗಿದೆ" (1 ಯೋಹಾನ 4:11). "ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ" (1 ಯೋಹಾನ 4:19).

ದೇವರು ಪ್ರೀತಿ ಸ್ವರೂಪಿಯಾಗಿರುವದರಿಂದ, ನಾವು ಸಹ ದೇವರಂತೆಯೇ, ಒಬ್ಬರನ್ನೊಬ್ಬರು ಪ್ರೀತಿಸಬೇಕು - ಪ್ರೀತಿಯೇ ದೇವರ ಸ್ವಭಾವವಾಗಿದೆ. ಪ್ರೀತಿಯನ್ನು ತೋರಿಸುವಲ್ಲಿ ನಾವುಗಳು ದೇವರ ಸ್ವಭಾವವನ್ನೇ ಹೊಂದಿರಬೇಕು. ನಿಮ್ಮನ್ನು ಕುರಿತು ಜನರು ವಿವರಿಸುವಾಗ, ಈಕೆಯು, ಅಥವಾ (ಈತನು) "ಪ್ರೀತಿ" ಎಂದು ಜನರು ಕರೆಯುತ್ತಾರೆಯೇ?

**ದೇವರ ಪ್ರೀತಿ ಎಂಥದ್ದಾಗಿದೆ?**

*ದೇವರ ಸ್ವಭಾವವು ಪ್ರೀತಿಯಾಗಿದೆ. ದೇವರ ಸ್ವಭಾವದಲ್ಲಿಯೇ ಪ್ರೀತಿಯು ಅಡಕವಾಗಿದೆ* (1 ಯೋಹಾನ 4:9). ದೇವರು ಪರಲೋಕದಲ್ಲಿದ್ದು, "ನಾನು ನಿಮ್ಮನ್ನು ಪ್ರೀತಿಸುತ್ತೇನೆ" ಎಂಬ ಪತ್ರವನ್ನು ಕಳುಹಿಸಲಿಲ್ಲ. ಆತನು ಕೇವಲ ಪ್ರೀತಿಸುತ್ತೇನೆ ಎಂದು ಹೇಳದೆ, ಕ್ರಿಯೆಯಲ್ಲಿ ತೋರಿಸಿದ್ದಾನೆ, ತನ್ನ ಮಗನನ್ನು ನಮಗಾಗಿ ಅರ್ಪಿಸಿದನು, ಅದೇ ವಿಧದಲ್ಲಿ ನಾವು ಪ್ರೀತಿ ಸುವರಾಗಿರಬೇಕು:

> ಈ ಲೋಕದ ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರರನನ್ನು ನೋಡಿ ಕರುಣಿಸದೆ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವದುಂಟೇ? ಪ್ರಿಯರಾದ ಮಕ್ಕಳೇ, ನಾವು ಬರೀಮಾತಿನಿಂದಾಗಲಿ ಬಾಯುಪಚಾರದಿಂದಾಗಲಿ ಪ್ರೀತಿಸುವವರಾಗಿರಬಾರದು ನಿಮ್ಮ ಪ್ರೀತಿಯು ಕೃತದಲ್ಲಿಯೂ ಸತ್ಯದಲ್ಲಿಯೂ ತೋರ ಬೇಕು (1 ಯೋಹಾನ 3:17, 18).

ಕ್ರೈಸ್ತರು ಒಬ್ಬರನ್ನೊಬ್ಬರು "ಮುದ್ದಿಸಿ," ಆಲಿಂಗಿಸಿ, ವಿಶ್ವಾಸವನ್ನು ತೋರ್ಪಡಿಸುವದು ಒಳ್ಳೇಯದೇ ಆದರೆ ಅದರೊಂದಿಗೆ ಸಹಾಯದ ಹಸ್ತವನ್ನು ಸಹ ಚಾಚಬೇಕು. ಅನೇಕ ಸಾರಿ, "ನಾನು ಪ್ರೀತಿಸುವೆ" ಎಂದು ಹೇಳುವ ಕ್ರೈಸ್ತರು, ಪ್ರಾಯೋಗಿಕವಾದ ಪ್ರೀತಿಯನ್ನು ತೋರಿಸುವದಿಲ್ಲ. ಕೆಲವರು "ನಾನು ಪ್ರೀತಿಸುವೆ" ಎಂದು ಹೇಳದಿದ್ದರೂ, ಪ್ರಾಯೋಗಿಕವಾದ ಪ್ರೀತಿಯನ್ನು ತೋರಿಸುತ್ತಾರೆ.

- ಆಹಾರದ ಕೊರತೆಯಿದ್ದರೆ, ಅದನ್ನು ನೀಗಿಸುತ್ತಾರೆ.
- ಪ್ರಯಾಣದ ಅಗತ್ಯವಿದ್ದರೆ, ವಾಹನವನ್ನು ಒದಗಿಸುವರು.
- ಸ್ಥಳದ ಅಗತ್ಯವಿದ್ದರೆ, ಅಂತವರಿಗೆ ವಾಸಿಸಲು ಸ್ಥಳಾವಕಾಶ ಮಾಡುತ್ತಾರೆ.
- ರೋಗಿಗಳಿಗೂ ಪ್ರಿಯರನ್ನು ಕಳಕೊಂಡವರಿಗೂ ಸಾಂತ್ವನ ನೀಡುವರು.
- ಹಣದ ಕೊರತೆಯುಳ್ಳವರಿಗೆ "ಸಮಾಧಾನದಿಂದ ಹೋಗಿರಿ" (ಯಾಕೋಬ 2:16), ಬೆಂಕಿ ಕಾಯಿಸಿಕೊಳ್ಳಿರಿ ಹೊಟ್ಟೆ ತುಂಬಿಸಿಕೊಳ್ಳಿರಿ" ಎಂದು ಹೇಳದೆ (1 ಯೋಹಾನ 3:17), ಆದರೆ ಅಗತ್ಯದ ಸಹಾಯ ನೀಡುತ್ತಾರೆ.

ಈ ಎರಡು ವಿಧವಾದ ಕ್ರೈಸ್ತರಲ್ಲಿ "ನಾನು ಪ್ರೀತಿಸುತ್ತೇನೆ" ಎಂದು ಹೇಳುವವನು "ಪ್ರೀತಿಯ ಕಾಯಕ ಮಾಡುವದಿಲ್ಲ" ಒಬ್ಬನು ಈ ಮಾತನ್ನು ಹೇಳದೆ ಇದ್ದರೂ ಕಾರ್ಯದಲ್ಲಿ ಪ್ರೀತಿ ತೋರುತ್ತಾರೆ. ಇವರಲ್ಲಿ ಪ್ರಮುಖರು ಯಾರು?

ದೇವರ ಪ್ರೀತಿಯು ಸಹ ಇದೇ ವಿಧದಲ್ಲಿ ಪ್ರಚುರವಾಗಿದೆ: *ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟದರಲ್ಲಿಯೇ ಪ್ರೀತಿ ಇಂಥದೆಂದು ನಮಗೆ ತಿಳಿದು ಬಂದದೆ. ನಾವು ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ.* 1 ಯೋಹಾನ 3:16: "ಸ್ನೇಹಿತರಿಗಾಗಿ ಪ್ರಾಣಕೊಡುವಷ್ಟು ಪ್ರೀತಿ ನಮ್ಮದಾಗಿರಬೇಕು."

ಪ್ರಥಮ ಶತಮಾನದಲ್ಲಿ ಸಹೋದರರು, ಸಹೋದರರಿಗಾಗಿ ಪ್ರಾಣಕೊಟ್ಟರು. ಆ ದಿನಗಳಲ್ಲಿ ನಾವುಗಳು ಜೀವಿಸುವವರಾಗಿದ್ದರೆ, ಯೇಸುವಿನ ನಾಮವನ್ನು ತಿರಸ್ಕರಿಸದವರು, ಅಂದಿನ ಅಧಿಕಾರಿಗಳ ಶಿಕ್ಷೆಗೆ ಒಳಗಾಗಬೇಕಿತ್ತು. ಒಂದು ವೇಳೆ ನೀವುಗಳು ಸಿಕ್ಕಿಬಿದ್ದು, ನೀವು ಕ್ರೈಸ್ತರು ಎಂದು ನಿಮ್ಮ ನೆರೆಹೊರೆಯವರು ಸಾಕ್ಷಿ ನುಡಿದರೆ, "ನೀನು ಯೇಸುವಿನ ಆರಾಧಕನಾಗಿ ಅಪರಾಧ ಮಾಡಿರುವದರಿಂದ, ಶಿಕ್ಷೆಗೆ ಪಾತ್ರನು" ಎಂಬ ತೀರ್ಪನ್ನು ನ್ಯಾಯಾಧಿಪತಿಯು ನೀಡುತ್ತಿದ್ದನು. ಒಂದು ವೇಳೆ ಸಭೆಯಲ್ಲಿನ ಇತರೆ ಕ್ರೈಸ್ತರ ಹೆಸರನ್ನು ಹೆಸರಿಸುವದಾದರೆ, ನಿನ್ನನ್ನು ಕ್ಷಮಿಸುತ್ತೇನೆ ಎಂದು ಹೇಳುತ್ತಿದ್ದರು, ನೀನು ಯೇಸುವನ್ನು ನೀಡಬೇಕು ಹಾಗಿರುವದಾದರೆ, ನೀನು ಏನು ಮಾಡುತ್ತಿದ್ದೆ? ನೀನು ಜೀವಿಸುವ ಸಲುವಾಗಿ

ನಿನ್ನ ಸಹೋದರ, ಸಹೋದರಿಯರ ಹೆಸರನ್ನು ಹೇಳಲು ಮುಂದಾಗುತ್ತಿದ್ದೆಯೇ? ಅಥವಾ ಮರಣವನ್ನು ಅಂಗೀಕರಿಸುತ್ತಿದ್ದೆಯೇ, ಅಥವಾ ಹೆಸರನ್ನು ಹೇಳಲು ನಿರಾಕರಿಸುತ್ತಿದ್ದೆಯೇ? ನಿನ್ನ ಪ್ರೀತಿಯನ್ನು ತೋರುವ ಸಲುವಾಗಿ, ನಿನ್ನವರಿಗಾಗಿ ನೀನು ಪ್ರಾಣವನ್ನು ಈಡು ಕೊಡಬೇಕಿತ್ತು.

ಈ ದಿವಸಗಳಲ್ಲೂ, ಕೆಲವು ಕಡೆ ಇಂತಹ ಘಟನೆಗಳು ನಡೆಯುತ್ತಿವೆ. ನಮ್ಮ ಕರೆಯು ನಿಜವಾಗಿದ್ದರೆ - ನಾವು ದೇವರನ್ನು ಪ್ರೀತಿಸುವದಾದರೆ - ನಮ್ಮ ಸಹೋದರರಿಗಾಗಿ ಪ್ರಾಣ ನೀಡಬೇಕು!

*ಯೇಸು ನೀತಿವಂತರಿಗಾಗಿ ಪ್ರಾಣನೀಡದೆ, ದೈವ ಭಕ್ತಿ ಇಲ್ಲದವರಿಗಾಗಿ ಪ್ರಾಣ ನೀಡಿರುವಲ್ಲಿ, ದೇವರ ಪ್ರೀತಿಯು ಗೋಚರವಾಗಿದೆ.* "ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ, ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದರಲ್ಲಿಯೇ ಪ್ರೀತಿಯ ನಿಜ ಗುಣವು ತೋರಿ ಬರುತ್ತದೆ" (1 ಯೋಹಾನ 4:10). ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ (ನೋಡಿರಿ ರೋಮಾಪುರ 5:8). ಪ್ರೀತಿಸಲಾರದವರನ್ನು ಆತನು ಪ್ರೀತಿಸಿದನು.

ದೇವರ ಪ್ರೀತಿಯಂತೆ, ನಾವುಗಳು ಪ್ರೀತಿಸಬೇಕಾದರೆ, ಪ್ರೀತಿ ಇಲ್ಲದವರಿಗೆ ಪ್ರೀತಿಯನ್ನು ತೋರಿಸಬೇಕು. ಅದು ಕಷ್ಟಕರವೇ! ಪ್ರೀತಿಸುವವರನ್ನು ಪ್ರೀತಿಸುವದು ಸುಲಭ - ಆದರೆ ಕೆಟ್ಟವರನ್ನು, ಕೃತಜ್ಞತೆ ತೋರದವರನ್ನು ಅಸಹ್ಯ ಸ್ವಭಾವದರನ್ನು ಪ್ರೀತಿಸುವದು ಕಷ್ಟವಲ್ಲವೇ? ನಮ್ಮನ್ನು ಇಷ್ಟಪಡದವರನ್ನು ಪ್ರೀತಿಸಬಹುದೇ? ನಮ್ಮ ವಿರೋಧಿಗಳನ್ನು ಹೇಗೆ ಪ್ರೀತಿಸಬಹುದು?

ಹೌದು, ಸತ್ಯವೇದದ ಪ್ರೀತಿಯು, ಉದ್ವೇಗ ಪೂರ್ವಕವಾಗಿರುವದಿಲ್ಲ. ಅದು ಉತ್ತಮವಾದದ್ದೇ, ಸಭೆಯಲ್ಲಿ ಬಲಹೀನವಾದವರಿಗೆ ನಾವುಗಳು ತೋರುವ ಪ್ರೀತಿಯೇ ನಿದರ್ಶನವಾಗಿದೆ. ಅವರು ಏನೇ ಇರಲಿ ಅವರು ಎಂಥವರೇ ಆಗಿರಲಿ ಅವರನ್ನು ನಾವು ಪ್ರೀತಿಸಬೇಕು, ಅವರಿಗೆ ಉತ್ತಮವಾದದ್ದನ್ನೇ ಬಯಸಿ, ಅವರೊಂದಿಗೆ ತಾಳ್ಮೆವುಳ್ಳವರಾಗಿರಬೇಕು (1 ಕೊರಿಂಥ 13:4-7).

ಸಹೋದರ ಪ್ರೀತಿಯು ಆಯ್ಕೆಯಾಗಿರದೆ, ಅದನ್ನು ನಾವು ಮಾಡಲೇಬೇಕು! 1 ಯೋಹಾನ 3:11, "ನಾವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬುದೇ ನೀವು ಮೊದಲಿನಿಂದಲು ಕೇಳಿದ ವಾಕ್ಯವಾಗಿದೆ." 1 ಯೋಹಾನ 3:23 "ನಾವು ಆತನ ಮಗನಾದ ಯೇಸು ಕ್ರಿಸ್ತನ ಹೆಸರನ್ನು ನಂಬಿ ಕ್ರಿಸ್ತನು ನಮಗೆ ಅಪ್ಪಣೆ ಕೊಟ್ಟ ಪ್ರಕಾರ ಒಬ್ಬರನ್ನೊಬ್ಬರು ಪ್ರೀತಿಸಬೇಕು" ಹಾಗೂ 4:21 ರಲ್ಲಿ, "ದೇವರನ್ನು ಪ್ರೀತಿಸುವವನು ಸಹೋದರರರನ್ನು ಪ್ರೀತಿಸುವನು ಇದು ದೇವರ ಕಟ್ಟಳೆಯಾಗಿದೆ. ನನ್ನ ಟೀಕಾಕಾರನಾದ ಹಳೆಯ ಸಹೋದರನನ್ನು ಹೇಗೆ ಪ್ರೀತಿಸಬೇಕು." ಎನ್ನುವದಾದರೆ, ಅವನನ್ನು ಪ್ರೀತಿಸುವ ಮಾರ್ಗೋಪಾಯವನ್ನು ಕಂಡುಹಿಡಿಯಬೇಕು![4] ಅದು ನೀನು ಮಾಡಲೇಬೇಕಾದ ಸಂಗತಿಯಾಗಿದೆ!

ಅಪಾತ್ರರಿಗಾಗಿ ದೇವರು ತನ್ನ ಮಗನನ್ನು ಅರ್ಪಿಸಿದಂತ ಪ್ರೀತಿ ನಿನ್ನದಾಗಿರಬೇಕು!

## ನಾವು ಇದನ್ನು ಮಾಡುವದಾದರೆ, ದೇವರು ನಮ್ಮೊಂದಿಗಿರುತ್ತಾನೆ (1 ಯೋಹಾನ 4:12-16)

ದೇವರನ್ನು ಯಾರೂ ಎಂದೂ ನೋಡಿಲ್ಲ; ನಾವು ಒಬ್ಬರನ್ನೊಬ್ಬರು ಪ್ರೀತಿಸಿದರೆ ದೇವರು ನಮ್ಮಲ್ಲಿ ನೆಲೆಗೊಂಡಿದ್ದಾನೆ, ಮತ್ತು ಆತನಿಂದಾಗುವ ಪ್ರೀತಿಯು ನಮ್ಮಲ್ಲಿ ಸಿದ್ಧಿಗೆ ಬರುತ್ತದೆ. ದೇವರು ನಮಗೆ ತನ್ನ ಆತ್ಮದಲ್ಲಿ ಪಾಲನ್ನು ಅನುಗ್ರಹಿಸಿದ್ದರಿಂದಲೇ ನಾವು

ಆತನಲ್ಲಿ ನೆಲೆಗೊಂಡಿದ್ದೇವೆಂತಲೂ ಆತನು ನಮ್ಮಲ್ಲಿ ನೆಲೆಗೊಂಡಿದ್ದಾನೆಂತಲೂ ತಿಳಿದುಕೊಳ್ಳುತ್ತೇವೆ.

ತಂದೆಯು ತನ್ನ ಮಗನನ್ನು ಲೋಕರಕ್ಷಕನನ್ನಾಗಿ ಕಳುಹಿಸಿ ಕೊಟ್ಟಿರುವದನ್ನು ನಾವು ನೋಡಿದ್ದೇವೆ, ಅದರ ವಿಷಯದಲ್ಲಿ ಸಾಕ್ಷಿಹೇಳುತ್ತೇವೆ. ಯೇಸು ದೇವರ ಮಗನಾಗಿದ್ದಾನೆಂದು ಯಾವನು ಒಪ್ಪಿಕೊಂಡು ಹೇಳುತ್ತಾನೋ ಅವನಲ್ಲಿ ದೇವರು ನೆಲೆಗೊಂಡಿದ್ದಾನೆ. ಅವನು ದೇವರಲ್ಲಿ ನೆಲೆಗೊಂಡಿದ್ದಾನೆ. ದೇವರು ನಮ್ಮಲ್ಲಿಟ್ಟಿರುವ ಪ್ರೀತಿಯನ್ನು ನಾವು ತಿಳಿದುಕೊಂಡಿದ್ದೇವೆ ಅದನ್ನು ನಂಬಿದ್ದೇವೆ.

ದೇವರೊಂದಿಗಿನ ಅನ್ಯೋನ್ಯತೆ ಎಂದರೆ - ಆತನು ನಮ್ಮೊಂದಿಗೂ ನಾವು ಆತನೊಂದಿಗೂ ಇರುವದೇ ಆಗಿದೆ. ಅದು ಕ್ರೈಸ್ತರ ಪ್ರಮುಖ ಗುರಿಯಾಗಿದೆ. ಇಂಥಹ ಅನ್ಯೋನ್ಯತೆಯನ್ನು ಹೇಗೆ ಅರಿಯಬಹದು? 1 ಯೋಹಾನ 4:12-16 ರಲ್ಲಿ ಕೆಲವು ಕಾರಣಗಳನ್ನು ನೀಡಲಾಗಿದೆ:

(1) ನಾವು ಒಬ್ಬರನ್ನೊಬ್ಬರು ಪ್ರೀತಿಸುತ್ತೇವೆ (4:12; ನೋಡಿರಿ ವಚನ 16).
(2) ಆತನು ನಮಗೆ ತನ್ನ ಆತ್ಮವನ್ನು ನೀಡಿರುವನು (4:13).
(3) ಅಪೊಸ್ತಲರ ಸಾಕ್ಷಿಯನ್ನು ನಂಬಿ, ಯೇಸುವನ್ನು ದೇವರ ಮಗನೆಂದು ಅರಿಕೆ ಮಾಡಿದ್ದೇವೆ (4:14, 15).
(4) ದೇವರ ಪ್ರೀತಿ ನಮಗಾಗಿ ಅದೆ (4:16).

ಒಬ್ಬರನ್ನೊಬ್ಬರು ಪ್ರೀತಿಸುವದರಿಂದ, ನಾವು ದೇವರಲ್ಲಿ ಇದ್ದೇವೆ ಎಂದು ಅರಿಯಬಹುದು, ಅಥವಾ ಸಹೋದರ ಸಹೋದರಿಯರನ್ನು ಪ್ರೀತಿಸದಿದ್ದರೆ ನಾವು ದೇವರನ್ನು ಅರಿತಿರುವದಿಲ್ಲ!

## ಆದ ಕಾರಣ ಪ್ರೀತಿಯು ಭರವಸೆಯನ್ನು ಉಂಟು ಮಾಡುತ್ತದೆ
## (1 ಯೋಹಾನ 4:17, 18)

ದೇವರು ಪ್ರೀತಿಸ್ವರೂಪಿ; ಪ್ರೀತಿಯಲ್ಲಿ ನೆಲೆಗೊಂಡಿರುವವನು ದೇವರಲ್ಲಿ ನೆಲೆಗೊಂಡಿದ್ದಾನೆ, ದೇವರು ಅವನಲ್ಲಿ ನೆಲೆಗೊಂಡಿದ್ದಾನೆ. ನ್ಯಾಯತೀರ್ಪಿನ ದಿನದಲ್ಲಿ ನಮಗಿರುವ ಧೈರ್ಯದಲ್ಲಿಯೇ ಆತನ ಪ್ರೀತಿಯು ನಮ್ಮೊಳಗೆ ಸಿದ್ಧಿಗೆ ಬಂತು. ಯಾಕಂದರೆ ಕ್ರಿಸ್ತನು ಎಂಥವನಾಗಿದ್ದಾನೋ ನಾವು ಅಂಥವರಾಗಿಯೇ ಈ ಲೋಕ ದಲ್ಲಿದ್ದೇವೆ. ಪ್ರೀತಿಯು ಇರುವಲ್ಲಿ ಹೆದರಿಕೆಯಿಲ್ಲ. ಹೆದರಿಕೆಯು ಯಾತನೆಯನ್ನು ಹೊಂದುತ್ತಾ ಇರುವದು; ಪೂರ್ಣಪ್ರೀತಿಯು ಹೆದರಿಕೆಯನ್ನು ಹೊರಡಿಸಿಬಿಡುತ್ತದೆ. ಹೆದರುವವನು ಪ್ರೀತಿಯಲ್ಲಿ ಸಿದ್ಧಿಗೆ ಬಂದವನಲ್ಲ.

ಉನ್ನತವಾದ ದಿನವು ಬರುತ್ತದೆ ಎಂದು ನಾವು ಹಾಡುತ್ತೇವೆ. ಅಂದರೆ ದೇವರ ನ್ಯಾಯ ತೀರ್ಪಿನ ದಿನವು ಬರುತ್ತದೆ ಎಂಬ ಭಯವು ಅನೇಕರಲ್ಲಿ ಅಡಕವಾಗಿದೆ. ಆದರೆ ಭಯಪಡುವ ಅಗತ್ಯವಿಲ್ಲ ಎಂದು ಯೋಹಾನನು ತೀರ್ಪಿನ ದಿನದಲ್ಲಿ ಧೈರ್ಯವಿದೆ ಎಂದಿರುವನು (4:17). “ಪ್ರೀತಿಯು ಇರುವಲ್ಲಿ ಹೆದರಿಕೆಯಿಲ್ಲ” (4:18ಎ).

ದೇವರ ತೀರ್ಪಿನ ದಿನದಲ್ಲಿ ಭಯವನ್ನು ತೆಗೆದು, ಧೈರ್ಯವನ್ನು ನೀಡುವ ಈ ಪ್ರೀತಿ ಯಾವದು? ಅದು “ಪರಿಪೂರ್ಣವಾದ ಪ್ರೀತಿ” (1 ಯೋಹಾನ 4:17; ನೋಡಿ 2:5). ನಾವು ಒಬ್ಬರನ್ನೊಬ್ಬರು ಪ್ರೀತಿಸಿದರೆ, ನಾವು ಸಿದ್ಧಿಗೆ ಬರುತ್ತೇವೆ (4:18; ನೋಡಿ ವಚನ 12). “ಸಿದ್ಧಿಗೆ” ಅಂದರೆ ಪೂರ್ಣ ಎಂಬ ಅರ್ಥವಾಗಿದೆ. ಕ್ರೈಸ್ತರನ್ನು ನಾವುಗಳು ಪ್ರೀತಿಸುವಲ್ಲಿ ನಾವು

ಪೂರ್ಣರಾಗುತ್ತೇವೆ ಎಂದು ಯೋಹಾನನು ನುಡಿದಿರುವನು.[5]

ಬಹುಶಃ ಮಾನವನಾದ ಒಬ್ಬ ತಂದೆಯು ತನ್ನ ಮಗುವಿಗೆ ಪ್ರೀತಿಯ ಬಗ್ಗೆ ತರಬೇತಿ ನೀಡುವಂತ ಆಲೋಚನೆಯು ದೇವರದ್ದಾಗಿರಬಹುದು ನಮ್ಮ ಮಕ್ಕಳು ಪರಸ್ಪರ ಪ್ರೀತಿಸಬೇಕು ಎಂದು ಮೌಖಿಕವಾಗಿ ಬೋಧಿಸಿರಬಹುದು. ಒಂದು ವೇಳೆ ಅವರು ಈ ಮಾತನ್ನು ಪಾಲಿಸಿದರೆ ಪ್ರಶಂಸೆ, ಅಥವಾ ಪಾಲಿಸದಿದ್ದರೆ ಶಿಕ್ಷೆ ನೀಡಬಹುದು. ಪರೋಪಕಾರದ ಸ್ವಭಾವವು ನಮ್ಮಲ್ಲಿರಬಹುದು, ನಾವು ಅದನ್ನು ನಮ್ಮ ಮಕ್ಕಳಿಗೆ ವರ್ಗಾಯಿಸಲು ಪ್ರಯತ್ನಿಸಬಹುದು. ನಮ್ಮ ಮಕ್ಕಳು ಈ ಕಾರ್ಯಗಳನ್ನು ಮಾಡುವವರೆಗೆ, ನಮ್ಮ ಕೆಲಸವು ಪೂರ್ಣಗೊಳ್ಳುವದಿಲ್ಲ. ಅದನ್ನು ನಾವು ಕಾಣುವಾಗ, ನಮಗೆ ಸಂತೃಪ್ತಿಯಾಗುತ್ತದೆ. ಹಾಗೆಯೇ ದೇವರ ಪ್ರೀತಿಯು ನಮ್ಮಲ್ಲಿ ಪೂರ್ಣವಾಗದೆ ಇದ್ದರೆ, ದೇವರ ಪ್ರೀತಿಯು ಸಹ ಸಿದ್ಧಿಗೆ ಬರಲಾರದು.

ಒಬ್ಬರನ್ನೊಬ್ಬರು ಪ್ರೀತಿಸುವಲ್ಲಿ ಸಫಲರಾಗದೆ ಇದ್ದರೆ, ದೇವರ ಪ್ರೀತಿಯು ನಮ್ಮಲ್ಲಿ ಪೂರ್ಣವಾಗದು ಮತ್ತು ದೇವರ ಯೋಜನೆಯ ಸಾಧನೆಯು ನಮ್ಮಲ್ಲಿ ಆಗಿರುವದಿಲ್ಲ.

ದೇವರ ನ್ಯಾಯ ತೀರ್ಪಿನ ದಿನದ ಬಗ್ಗೆ ನಿಮ್ಮ ಅಭಿಪ್ರಾಯವೇನು? ನೀವು ಅಧೈರ್ಯಗೊಂಡು, ಭರವಸೆ ಕಳಕೊಂಡಿರುವಿರಾ? ನೀವು ದೇವರ ಮಗುವಾಗಿದ್ದು, ಒಬ್ಬರನ್ನೊಬ್ಬರು ಪ್ರೀತಿಸಿದ್ದೆಯಾದರೆ ಭಯಪಡುವ ಅಗತ್ಯವಿಲ್ಲ ಯಾಕಂದರೆ ಪರಿಪೂರ್ಣ ಪ್ರೀತಿಯು ಭಯವನ್ನು ತೆಗೆಯುತ್ತದೆ.

## ಆದ ಕಾರಣ ನಾವು ದೇವರನ್ನು ಪ್ರೀತಿಸುತ್ತೇವೆ (1 ಯೋಹಾನ 4:19-21)

> ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ. ಒಬ್ಬನು ತಾನು ದೇವರನ್ನು ಪ್ರೀತಿಸುತ್ತೇನೆಂದು ಹೇಳಿ ತನ್ನ ಸಹೋದರನನ್ನು ದ್ವೇಷಿಸಿದರ ಅವನು ಸುಳ್ಳುಗಾರನಾಗಿದ್ದಾನೆ. ತಾನು ಕಂಡಿರುವ ತನ್ನ ಸಹೋದರನನ್ನು ಪ್ರೀತಿಸದವನು ತಾನು ಕಾಣದಿರುವ ದೇವರನ್ನು ಪ್ರೀತಿಸಲಾರನು. ದೇವರನ್ನು ಪ್ರೀತಿಸುವವನು ತನ್ನ ಸಹೋದರನನ್ನೂ ಪ್ರೀತಿಸಬೇಕೆಂಬ ಆಜ್ಞೆಯನ್ನು ನಾವು ಆತನಿಂದ ಹೊಂದಿದ್ದೇವೆ.

ದೇವರ ಪ್ರೀತಿಗೆ ಪ್ರತ್ಯುತ್ತರವಾಗಿ ನಮ್ಮ ಪ್ರೀತಿಯನ್ನು ನೀಡಬೇಕು. ಯೋಹಾನನು ತಿಳಿಸಿದ ಪ್ರೀತಿಯು ನಮ್ಮಲ್ಲಿರಬೇಕು. "ನಾನು ದೇವರನ್ನು ಪ್ರೀತಿಸುತ್ತೇನೆ" (ವಚನ 20), ಅಂದರೆ, ಕ್ರೈಸ್ತರು ತಂದೆಯನ್ನು ಪ್ರೀತಿಸುವವರು ಎಂಬ ಅರ್ಥವಾಗಿದೆ (ನೋಡಿ 1 ಯೋಹಾನ 2:15; 4:21; 4:10; 5:1-3).

ನಾವು ದೇವರನ್ನು ಪ್ರೀತಿಸುವವರಾದರೆ, ನಮ್ಮ ಸಹೋದರರನ್ನು ಹೇಗೆ ನಡೆಸಿಕೊಳ್ಳಬೇಕು. (ಎ) ಪ್ರತಿ ಮಾನವನು ದೇವರ ಸ್ವರೂಪವಾಗಿರುವನು. (ಬಿ) ಪ್ರೀತಿಗೆ ಅಪಾತ್ರರಾದವರನ್ನು ಸಹ ದೇವರು ಪ್ರೀತಿಸುತ್ತಾನೆ. (ಸಿ) ದೇವರ ಪ್ರೀತಿ ಹಾಗೂ ಆಶೀರ್ವಾದಗಳನ್ನು ಅನುಭವಿಸಿದ ದೇವರ ಮಕ್ಕಳು, ದೇವರ ಸ್ವಭಾವವನ್ನು ಹೊಂದಿರುತ್ತಾರೆ. "ಆತನಿರುವಂತೆ, ನಾವುಗಳು ಸಹ ಇರಬೇಕು" (1 ಯೋಹಾನ 4:17). (ಡಿ) ಕ್ರೈಸ್ತರಾದವರೆಲ್ಲರೂ ನಮ್ಮ ಸಹೋದರ ಸಹೋದರಿಯರಾಗಿರುವರು, ಅವರಿಗಾಗಿ ಪ್ರಾಣಕೊಡಲು ಸಹ ಸಿದ್ಧರಾಗಿರಬೇಕು (1 ಯೋಹಾನ 3:16)! ಒಬ್ಬನು ತನ್ನ ಸಹೋದರನನ್ನು ದ್ವೇಶಿಸಿದರೆ, ಅವನಲ್ಲಿ ದೇವರ ಪ್ರೀತಿಯು ಇರುತ್ತದೆಯೇ (1 ಯೋಹಾನ 4:19, 20)? ನಿನ್ನ ದೇವರಾದ ಕರ್ತನನ್ನು ಹೃದಯ ಪೂರ್ವಕವಾಗಿ ಪ್ರೀತಿಸಬೇಕು, ಎಂಬ ಮೊದಲ ಆಜ್ಞೆಯನ್ನು ನೆರವೇರಿಸುವ ಮೊದಲು, "ನಿನ್ನ ನೆರೆಯವನನ್ನು ಪ್ರೀತಿಸಬೇಕು" - ಎಂಬ ಎರಡನೆಯ ಆಜ್ಞೆಯನ್ನು ಪಾಲಿಸಬೇಕು (ಮತ್ತಾಯ 22:37-39).

ಈಗ ನಾವೇನು ಮಾಡಬೇಕು? ದೇವರು ನಮ್ಮ ಮೇಲೆ ಇಟ್ಟಿರುವ ಪ್ರೀತಿಯ ಸಲುವಾಗಿ,

ನಾವು ಆತನನ್ನು ಪ್ರೀತಿಸಬೇಕು, ಈ ಪ್ರೀತಿಯ ನಿಮಿತ್ತವಾಗಿ ನಾವು ಒಬ್ಬರನ್ನೊಬ್ಬರು ಪ್ರೀತಿಸಬೇಕು. "ದೇವರನ್ನು ಪ್ರೀತಿಸುವವನು ತನ್ನ ಸಹೋದರನನ್ನೂ ಪ್ರೀತಿಸಬೇಕೆಂಬ ಆಜ್ಞೆಯನ್ನು ನಾವು ಆತನಿಂದ ಹೊಂದಿದ್ದೇವೆ" (1 ಯೋಹಾನ 4:21).

ಮತ್ತಾಯ 23ರ, ಯೇಸುವಿನ ಮಾತುಗಳನ್ನೇ 1 ಯೋಹಾನ 4:19-21ರಲ್ಲಿ ಪುನಃ ತಿಳಿಸಲಾಗಿದೆ. "ಅಲ್ಲಿ ಯೇಸು ಸದ್ದುಕಾಯರನ್ನು ಹಾಗೂ ಫರಿಸಾಯರನ್ನು ಕುರಿತು ಕಪಟಿಗಳು ಎಂದನು" (ಮತ್ತಾಯ 23:14). "ನೀವು ಮರುಗ ಸೋಪು ಜೀರಿಗೆಗಳಲ್ಲಿ ಹತ್ತರಲ್ಲೊಂದು ಅಂಶವನ್ನು ನೀಡುತ್ತೀರಿ ಸರಿ, ಆದರೆ ಧರ್ಮಶಾಸ್ತ್ರದಲ್ಲಿ ಗೌರವವಾದದ್ದನ್ನು ಅಂದರೆ ನ್ಯಾಯವನ್ನು ಕರುಣೆಯನ್ನು ನಂಬಿಕೆಯನ್ನು ಬಿಟ್ಟು ಬಿಟ್ಟಿದ್ದೀರಿ" (ಮತ್ತಾಯ 23:23). ಯೋಹಾನನು ಈ ವಿಧವಾಗಿಯೇ ಹೇಳುತ್ತಿಲ್ಲವೇ? ಒಂದು ವೇಳೆ ಈ ಸಹೋದರರು ಕ್ರಮವಾಗಿ ಸಭೆಗೆ ಹೋಗಿ, ಗಟ್ಟಿಯಾಗಿ ಪ್ರಾರ್ಥಿಸಿ, ಯೋಗ್ಯವಾದ ಹಾಡುಗಳನ್ನು ಹಾಡಿ, ದೇವರ ಪ್ರೀತಿಯನ್ನು ಕೊಂಡಾಡಿರಬಹುದು. ಆದರೆ ಜೊತೆ ಸಹೋದರನಿಗೆ ಸಹಾಯಿಸದೆ, ಅಲಕ್ಷ್ಯ ಮಾಡಿದ್ದಾದರೆ, ಕೊರತೆಯಲ್ಲಿರುವ ತನ್ನ ಸಹೋದರನನ್ನು ಪ್ರೀತಿಸದೆ ಇರುವದರಿಂದ, ಅವನು ಕಾಣದೆ ಇರುವ ದೇವರನ್ನು ಪ್ರೀತಿಸಲಾರನು![6]

## ಮುಕ್ತಾಯ

ಮುಕ್ತಾಯದ ಅಂತ್ಯದಲ್ಲಿ ನಮ್ಮ ಆತ್ಮಗಳ ಪರಿಸ್ಥಿತಿಯನ್ನು ಪರೀಕ್ಷಿಸಿಕೊಳ್ಳಬೇಕು. "ಆತ್ಮದಲ್ಲಿ ಎಲ್ಲವೂ ಸರಿಯಾಗಿದೆ"[7] ಎಂದು ಹಾಡುತ್ತೇವೆ. ನಿನ್ನ ಆತ್ಮವು ಸರಿಯಾಗಿದೆಯೇ? ಅದು ಹೇಗೆ ಸಾಧ್ಯ? ಯೇಸು ಶರೀರಧಾರಿಯಾದ ದೇವರ ಮಗನು ಎಂದು ನಂಬಿದರೆ ಅದು ಸಾಧ್ಯ. ನೀನು ದೇವ ಕಟ್ಟಳೆಗೆ ವಿಧೇಯನಾಗಿ ದೇವರ ಮಗುವಾದರೆ, ಹಾಗೂ ಆತನ ಹಾಗೂ ಆತನ ಜನರ ಸಹವಾಸವನ್ನು ದೇವರು ನಿನಗೆ ನೀಡಿರುವದಕ್ಕಾಗಿ, ಆತನ ಈ ಕೃಪೆಯನ್ನು ನೆನಪುಮಾಡಿ ಕೃತಜ್ಞನಾಗಿರು. ಕ್ರಿಸ್ತನ ಶಿಲುಬೆಯ ಮರಣದ ಮೂಲಕ ನೀನು ರಕ್ಷಣೆ ಹೊಂದಿರುವದಾದರೆ, ನಿನ್ನ ಜೀವಿತಕ್ಕೆ ಅಡ್ಡಬರುವ ಪಾಪಗ ಳನ್ನು ಜಯಿಸುವದಾದರೆ, ಆತನು ನಿನಗೆ ನೀಡಿರುವ ರಕ್ಷಣೆಗಾಗಿ ದೇವರನ್ನು ಸ್ತುತಿಸು.

ಸರಿಯಾದ ಬೋಧನೆಯನ್ನು ಕೇಳಿ, ಸುವಾರ್ತೆಗೆ ವಿಧೇಯನಾಗಿ, ಕರ್ತನ ಸಭೆಯ ಅನ್ಯೋನ್ಯತೆಯಲ್ಲಿದ್ದು, ದೇವರನ್ನು ಸ್ತುತಿಸಿ, ವೈಯಕ್ತಿಕ ಜೀವನದಲ್ಲಿ ಪಾಪದ ಮೇಲೆ ಜಯವನ್ನು ಸಾಧಿಸಿದರೆ, ಸಾಕೇ? ನಮ್ಮ ಆತ್ಮಗಳಿಗೆ ಇವುಗಳು ಸಾಕೇ ಅಥವಾ ಇನ್ನೂ ಅಧಿಕವಾದ ಸಂಗತಿ ಏನಾದರು ಇದೆಯೇ?

ನಂಬಿಗಸ್ತರಾದ ಕ್ರೈಸ್ತರಿಗೆ ಇನ್ನೂ ಅಧಿಕವಾದ ಸಂಗತಿಗಳಿವೆ. ಒಬ್ಬರನ್ನೊಬ್ಬರು ಪ್ರೀತಿಸುವ ಮೂಲಕ ದೇವರ ಮೇಲಿನ ಪ್ರೀತಿಯನ್ನು ಪ್ರಚುರ ಪಡಿಸಬಹುದಾಗಿದೆ; ಪ್ರೀತಿಯು ಬರೀ ಮಾತಿನಿಂದಿರದೆ ಅದು ಕ್ರಿಯೆಯಲ್ಲಿರಬೇಕು. ಇತರ ಕ್ರೈಸ್ತರಿಗೂ ಹಾಗೂ ಸಹೋದರರಿಗೂ ಪ್ರೀತಿಯನ್ನು ತೋರಿಸಿ, ಇತರರಿಗೆ ಸಹಾಯ ಮಾಡಲು ಮುಂದಾಗದಿದ್ದರೆ. ನಿನ್ನ ಹೃದಯದ ಪರಿಸ್ಥಿತಿಯನ್ನು ಆಲೋಚಿಸು?

---

ಟಿಪ್ಪಣೆಗಳು

[1]"ಅಗಪೆ" *agape* ಎಂಬ ಗ್ರೀಕ್ ಅನುವಾದ. [2]Robert Young, *Young's Analytical Concordance to the Bible* (Grand Rapids, Mich.: Wm. B. Eerdmans Publishing Co., n.d.), 622-23. [3]1 ಯೋಹಾನ 4:13-15ರ ಮೂರು ವಚನಗಳಲ್ಲಿ "ಪ್ರೀತಿ" ಎಂಬ ಪದ ಇಲ್ಲದಿದ್ದರೂ ಕ್ರೈಸ್ತರ-ದೇವರ-ಪರಸ್ಪರರ ನಡುವಿನ ಪ್ರೀತಿ ಎಂಬದೇ. [4]ನೋಡಿ 1 ಯೋಹಾನ 2:7-11; 3:11. [5]ಪರಸ್ಪರ ಪ್ರೀತಿಯು ಭರವಸೆ ತರುತ್ತದೆ; ಯೋಹಾನನು ಹೀಗೆ ಹೇಳುತ್ತಾನೆ: "ನಾವಂತೂ ಕ್ರೈಸ್ತ ಸಹೋದರರನ್ನು ಪ್ರೀತಿಸುವವರಾಗಿರುವದರಿಂದ ಮರಣದಂಡ ಪಾರಾಗಿ ಜೀವದಲ್ಲಿ ಸೇರಿದ್ದೇವೆಂಬದು

ನಮಗೆ ಗೊತ್ತಾಗಿದೆ" (1 ಯೋಹಾನ 3:14). [6]"ದೇವರು ಆತ್ಮವಾಗಿರುವದರಿಂದ" (ವಚನ 12), ಯಾರೂ ದೇವರನ್ನು ನೋಡಿರುವದಿಲ್ಲ (4:24). ಅವರು ದೇವರ ಸ್ವರೂಪವನ್ನು ನೋಡಿದ್ದಾರೆ. ದೇವರು ವಿಧವಿಧವಾಗಿ ತನ್ನನ್ನು ತೋರ್ಪಡಿಸಿಕೊಂಡಿರುವನು - ಉರಿಯುತ್ತಿದ್ದ ಪೊದೆ, ದೇವರ ಪ್ರತಿನಿಧಿ, ಅಥವಾ ಪ್ರಕಟನೆ. (John R. W. Stott, *The Epistles of John,* The Tyndale New Testament Commentaries [Grand Rapids, Mich.: Wm. B. Eerdmans Publishing Co., 1960], 163.) [7]Horatio G. Spafford, "It Is Well with My Soul," *Songs of Faith and Praise,* comp. and ed. Alton H. Howard (West Monroe, La.: Howard Publishing Co., 1994).

---

## ಕ್ರಿಸ್ತ ವಿರೋಧಿ

ಹೊಸ ಒಡಂಬಡಿಕೆಯಲ್ಲಿ, "ಕ್ರಿಸ್ತ ವಿರೋಧಿ" ಎಂಬ ಪದವನ್ನು ಯೋಹಾನನು ತಿಳಿಸಿರುವನು. 1 ಯೋಹಾನ 2:18; 2:22; 4:3; ಮತ್ತು 2 ಯೋಹಾನ 7:

- ಕಡೇ ಗಳಿಗೆಯಲ್ಲಿ ಕ್ರಿಸ್ತ ವಿರೋಧಿಯು ಬರುತ್ತಾನೆ ಎಂದು ಯೋಹಾನನ ಓದುಗಾರರು ಕೇಳಿದ್ದರು (1 ಯೋಹಾನ 2:18).
- ಅನೇಕ ಕ್ರಿಸ್ತ ವಿರೋಧರು ಕಾಣಿಸಿಕೊಂಡಿದ್ದಾರೆ; ಆದ್ದರಿಂದ ಸಮಯವು ಕಡೇ ಗಳಿಗೆಯಾಗಿದೆ (1 ಯೋಹಾನ 2:18).
- ಯೇಸು ಕ್ರಿಸ್ತನಲ್ಲ ಎನ್ನುವವನು ಕ್ರಿಸ್ತ ವಿರೋಧಿ (1 ಯೋಹಾನ 2:22).
- ಯೇಸು ಮಾನವನಾಗಿ ಬರಲಿಲ್ಲ ಎಂದು ಹೇಳುವವನು ಕ್ರಿಸ್ತ ವಿರೋಧಿಯ ಆತ್ಮವುಳ್ಳವನು (1 ಯೋಹಾನ 4:3).
- ಯೋಹಾನನು ಬರೆಯುವ ಕಾಲದಲ್ಲಿ ಕ್ರಿಸ್ತ ವಿರೋಧಿಗಳಿದ್ದರು (1 ಯೋಹಾನ 4:3).
- ಸುಳ್ಳು ಬೋಧಕರನ್ನು ಕ್ರಿಸ್ತ ವಿರೋಧಿಗೆ ಹೋಲಿಸಲಾಗಿದೆ (2 ಯೋಹಾನ 7).

ಅಧರ್ಮಿಯನ್ನು ಕ್ರಿಸ್ತ ವಿರೋಧಿ ಎನ್ನಲಾಗಿದೆ. 2 ಥೆಸಲೋನಿಕ 2:1-10, ಅವರು ಯೇಸುವಿನ ಬರೋಣದಲ್ಲಿ ಕಾಣಿಸಿಕೊಳ್ಳುವರು, ಅವರು ಅಂತ್ಯ ಕ್ರಿಸ್ತನ ಆತ್ಮವನ್ನು ಹೊಂದಿರುವರು.[1]

ವುಡ್ಸ್‌ರವರು, "ರೋಮಿನ ಪೋಪನನ್ನು" ಕ್ರಿಸ್ತ ವಿರೋಧಿ ಎಂದಿರುವರು![2] ದೇವರ ಮಹತ್ವದ ವಾಕ್ಯಗಳಿಗೆ ತದ್ವಿರುದ್ಧವಾದ ಅಧರ್ಮವನ್ನು ಕ್ರಿಸ್ತ ವಿರೋಧಿ ಎಂದಿರುವರು. ವಿವಿಧ ಸ್ಥಳದಲ್ಲಿನ, ವಿವಿಧವಾದ ತಪ್ಪುಗಳು.[3]

---

ಟಿಪ್ಪಣೆಗಳು

[1]Further information is given in F. F. Bruce, *The Epistles of John: Introduction, Exposition and Notes* (N.p.: Pickering & Inglis, 1970; reprint, Grand Rapids, Mich.: Wm. B. Eerdmans Publishing Co., 1986), 65-68, and W. E. Vine, *The Epistles of John: Light, Love, Life* (Grand Rapids, Mich.: Zondervan Publishing House, 1970), 35-36. [2]Guy N. Woods, *A Commentary on the New Testament Epistles of Peter, John, and Jude* (Nashville: Gospel Advocate Co., 1983), 242-43. [3]Goebel Music, "Difficult Passages in 1, 2, 3 John, No. I," *Denton Lectures* (1987), 385.